ಮನೆಯ ಶೂನ್ಯವನ್ನು ತುಂಬಲೋ ಅನ್ನುವಂತೆ ಇತ್ತ ಸರೋಜನ ಒಡಲಲ್ಲಿ ಕುಡಿಯೊಂದು ಪಲ್ಲವಿಸುವ ಸೂಚನೆ ಸಿಕ್ಕಿದಾಗ ನಲವತ್ತರ ಆಸುಪಾಸಿನಲ್ಲಿದ್ದಳು ಸರೋಜ. ಭಟ್ಟರಿಗೆ ಮತ್ತೂ ಆರು ವರ್ಷ ಜಾಸ್ತಿ. ಬಯಸಿ ಹಂಬಲಿಸಿದಾಗ ದೊರಕದ ಭಾಗ್ಯವನ್ನು ಅನಿರೀಕ್ಷಿತವಾಗಿ ಕೊಡಮಾಡಿತ್ತು ವಿಧಿ. ಸಂತೋಷದ ಪರಮಾವಧಿ ಅನ್ನುವ ಸ್ಥಿತಿ. ಒಳ್ಳೆಯದಾಗುವುದಕ್ಕೂ ಒಂದು ಕಾಲ ಅನ್ನುವುದು ಇರುತ್ತದೆಯಾ? ಅಥವಾ ಒಳ್ಳೆಯದರ ಮರೆಯಲ್ಲಿ ಕೆಟ್ಟದ್ದು, ಕೆಟ್ಟದ್ದೆಂಬುದರ ಮರೆಯಲ್ಲಿ ಒಳ್ಳೆಯದು ಹೊಂಚು ಹಾಕಿ ಕಾದು ನಿಂತಿರುತ್ತದೆಯಾ? ಒಂದನ್ನು ಬಿಟ್ಟು ಮತ್ತೊಂದಿಲ್ಲ ಅನ್ನುವುದು ಜೀವನದ ಅಲಿಖಿತ ನಿಯಮವಾಗಿಬಿಟ್ಟಿದೆಯಾ? ನವಮಾಸ ಕಳೆದು ಸರೋಜ ಹೆಣ್ಣುಮಗುವನ್ನು ಹೆತ್ತಳು. ಹೆತ್ತಿದ್ದಷ್ಟೇ, ತನ್ನ ಕಂದನನ್ನು ಕಣ್ಣರಳಿಸಿ ನೋಡಿ ಗಳಿಗೆ ಹೊತ್ತು ಸುಖಿಸಿದ್ದಷ್ಟೇ, ತೀವ್ರ ತಪನೆಯ ಫಲವೆಂಬಂತೆ ಮಡಿಲು ತುಂಬಿದ ತನ್ನ ಕರುಳಿನ ತುಣುಕನ್ನು ಎತ್ತಾಡಿಸುವ ಭಾಗ್ಯ ಅವಳಿಗೆ ಸಿಗಲಿಲ್ಲ. ಹೆರಿಗೆ ಸುಸೂತ್ರವಾಗಿ ನಡೆದಿದ್ದರೂ ನಂತರದ ತೊಡಕುಗಳಿಂದ ಸರೋಜ ಎಲ್ಲರನ್ನೂ ಅಗಲಿ ಕಾಣದ ಲೋಕಕ್ಕೆ ಹೊರಟುಹೋದಳು. ತೀವ್ರ ರಕ್ತಸ್ರಾವ ಅವಳ ಜೀವವನ್ನು ನುಂಗಿ ನೊಣೆಯಿತು ಮತ್ತು ಏನೂ ಅರಿಯದ ಹಸುಕಂದ ಅತ್ತೆಯ ಮಡಿಲಲ್ಲಿ ಆಶ್ರಯ ಪಡೆಯಿತು.

ಅಣ್ಣನ ಋಣ ತನ್ನ ಮೇಲೆ ಬಹಳಷ್ಟಿದೆ ಅಂದುಕೊಂಡಿದ್ದ ಸೀತೆಯ ಅನಿಸಿಕೆಯನ್ನು ಮರೆಗೆ ತಳ್ಳಿ ಇದೀಗ ಹಾಗೆಂದುಕೊಳ್ಳುವ ಸರದಿ ಭಟ್ಟರ ಪಾಲಿಗೆ ಬಂತು. ಮಾನವಜನ್ಮ ಅನ್ನುವುದು ತಾನು ಬದುಕಿ ಬಾಳುತ್ತಿರುವ ಪ್ರಪಂಚದಲ್ಲಿ ಯಾರ್ಯಾರ ಋಣದಿಂದ ಪೋಷಿತವಾಗಿರುತ್ತದೆಯೋ, ಜೀವರಸವನ್ನು ಹೀರಿ ವೃಕ್ಷವಾಗಿ ನಳನಳಿಸುತ್ತದೆಯೋ ಲೆಕ್ಕವಿಟ್ಟವರಾರು?

*****

'ತಂಗಿಯ ಮಗನಿಗೆ ಸಾಕಿ ಬೆಳೆಸಿದ ಕೃತಜ್ಞತೆ ಇಲ್ಲ' ಎಂದು ಆಶಾಭಂಗದ ಒಂದು ಗಳಿಗೆಯಲ್ಲಿ ಮನಸ್ಸು ಕೈಂಯಾಗಿದ್ದರೂ ದಿಕ್ಕು ತಪ್ಪಿದ ತಮ್ಮ ಯೋಚನಾಕ್ರಮವನ್ನು ಕ್ರಮೇಣ ಸಮಸ್ಥಿತಿಗೆ ತಂದುಕೊಳ್ಳುವಷ್ಟು ವಿವೇಚನೆ, ಸಂಸ್ಕಾರ ಭಟ್ಟರಿಗೆ ಇದ್ದೇ ಇತ್ತು. ಸತೀಶ ಮೆಚ್ಚಿಕೊಂಡ ಹುಡುಗಿಯೊಡನೆ ಅವನ ಮದುವೆ ಮಾಡಿ ಶುಭ ಹಾರೈಸುವಾಗ ಅವರ ಮನದಲ್ಲಿ ಕಿಂಚಿತ್ ಕಲ್ಮಷ ಇರಲಿಲ್ಲ. ಇದ್ದಿದ್ದೊಂದೇ, ಮಗಳಿಗೆ ಯೋಗ್ಯ ವರನನ್ನು ಹುಡುಕಿ ಜವಾಬ್ದಾರಿ ಕಳೆದುಕೊಳ್ಳುವ ಧಾವಂತ. ಇಳಿವಯಸ್ಸಿನಲ್ಲಿ ಹುಟ್ಟಿದ ಮಗಳು. ಅವಳ ಮದುವೆ ಮಾಡುವಾಗ ಭಟ್ಟರಿಗೆ ಎಪ್ಪತ್ತು ತುಂಬುವುದರಲ್ಲಿತ್ತು. ತಮಗೆ ಏನಾದರೂ ಆದರೆ ಸತೀಶ ಮಗಳನ್ನು ಹಾದಿಗೆ ಹತ್ತಿಸುತ್ತಾನೆ ಅನ್ನುವ ಧೈರ್ಯ ಇದ್ದರೂ ಆ ಕೆಲಸ ತಾವೇ ಮಾಡಿ ಮುಗಿಸಿದರೆ ನಿಶ್ಚಿಂತೆ. ತಂಗಿಯ ಮೇಲೆ, ತಂಗಿಯ ಮಗನ ಮೇಲೆ, ಸಂದರ್ಭ ಸೃಷ್ಟಿಸಿದ ಸನ್ನಿವೇಶದಿಂದ ಒಂದಲ್ಪ ಅಸಮಾಧಾನ ಆಗಿದ್ದಿದ್ದು ಹೌದಾದರೂ ಅದು ತಾತ್ಕಾಲಿಕವಾಗಿತ್ತು ಅಂದುಕೊಂಡಿದ್ದರು ಭಟ್ಟರು. ಆದರೆ ಎಂಜಿನಿಯರ್ ಹುಡುಗನೊಡನೆ ಮಗಳ ಮದುವೆ ಗೊತ್ತಾದಾಗ ಮನದೊಳಗೆ ಹೊರಳಾಡಿದ ಸಣ್ಣ ಸಮಾಧಾನದಂತಾ ಭಾವನೆ. 'ನನ್ನ ಮಗಳಿಗೂ ಎಂಜಿನಿಯರ್ ಆದವನೇ ಸಿಕ್ಕಿದ' ಅನ್ನುವುದು ಒಣಪ್ರತಿಷ್ಠೆಯನ್ನು ತೃಪ್ತಿಪಡಿಸಿತ್ತು. ರಜನಿಗೂ ಹೀಗೇನಾದರೂ ಅನಿಸಿರಬಹುದಾ? ಭಟ್ಟರಿಗೆ ಗೊತ್ತಿಲ್ಲ. ಅದೊಂದು ಹುಡುಗಾಟದ ಹುಡುಗಿ. ಎಲ್ಲರ ಮುದ್ದಿನಲ್ಲಿ ಸೊಕ್ಕಿ ಬೆಳೆದರೂ ಅಷ್ಟೇ ಮುಗ್ಧತನವನ್ನೂ ಹೊಂದಿದ್ದವಳು. 'ಸತೀಶ ತನ್ನನ್ನು ನಿರಾಕರಿಸಿದ' ಎನ್ನುವ ಕುರಿತು ಅವಳಲ್ಲಿ ಯಾವ ನಿರಾಶೆಯೂ ಆದಂತಿರಲಿಲ್ಲ ಅನ್ನುವುದಕ್ಕೆ ಅವಳು ಸತೀಶನ ಮದುವೆಯಲ್ಲಿ ಮೆರೆದಾಡಿದ್ದೇ ಸಾಕ್ಷಿ. ಆಯ್ತು, ಮಗಳಿಗೂ ಮದುವೆಯಾಗಿ ಎಲ್ಲಾ